(144)

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಡಿ.ಟಿ.ಶ್ರೀನಿವಾಸ್ ಇವರ ನಿಯಮ 72ರಡಿ**
**ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಹೇಳಿಕೆ**

**-: ಸೂಚನೆ :-**

ತುಮಕೂರು ಜಿಲ್ಲೆ, ಕೊರಟಗೆರೆ ತಾಲ್ಲೂಕು, ಕೋಳಾಲ ಹೋಬಳಿ, ನೀಲಗೊಂಡನಹಳ್ಳಿ ಗ್ರಾಮದ ಹೆಸರಿನ ಬದಲಿಗೆ ಕೆಲವೆಡೆ ಇರಕಸಂದ್ರ ಕಾಲೋನಿ (ಐ.ಕೆ.ಕಾಲೋನಿ) ಗ್ರಾಮ ಎಂದು ಉಲ್ಲೇಖಿಸಿ ಸರ್ಕಾರದ ವಿವಿಧ ಇಲಾಖೆಗಳು, ಸಂಸ್ಥೆಗಳು, ಗ್ರಾಮ ಪಂಚಾಯತಿ ಹಾಗೂ ಕೆಲವು ಖಾಸಗಿಯವರು ದಾಖಲೆಗಳಲ್ಲಿ ನಮೂದಿಸುತ್ತಿದ್ದು ಆ ರೀತಿ ನಮೂದಿಸುತ್ತಿರುವುದನ್ನು ಕೈಬಿಟ್ಟು, ಗ್ರಾಮಸ್ಥರು/ಸಾರ್ವಜನಿಕರು ಈಗಾಗಲೇ ಸರ್ಕಾರಕ್ಕೆ ಹಾಗೂ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿರುವ ಮನವಿಯಂತೆ ಮೂಲ ಅಧಿಕೃತ ಹೆಸರಾದ ನೀಲಗೊಂಡನಹಳ್ಳಿ ಗ್ರಾಮವೆಂದೇ ಎಲ್ಲಾ ಸರ್ಕಾರದ ದಾಖಲೆಗಳು ಮತ್ತು ಸರ್ಕಾರದ ವ್ಯವಹಾರಗಳಲ್ಲಿ ನಮೂದಿಸುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನವನ್ನು ಸೆಳೆಯಲು ಬಯಸುತ್ತೇನೆ.

**-: ಹೇಳಿಕೆ :-**

ತುಮಕೂರು ಜಿಲ್ಲೆ, ಕೊರಟಗೆರೆ ತಾಲ್ಲೂಕು, ಕೋಳಾಲ ಹೋಬಳಿ, ನೀಲಗೊಂಡನಹಳ್ಳಿ ಗ್ರಾಮದ ಹೆಸರಿನ ಬದಲಿಗೆ ಇರಕಸಂದ್ರ ಕಾಲೋನಿ (ಐ.ಕೆ.ಕಾಲೋನಿ) ಗ್ರಾಮ ಎಂದು ಉಲ್ಲೇಖಿಸಿ ಸರ್ಕಾರದ ವಿವಿಧ ಇಲಾಖೆಗಳು, ಸಂಸ್ಥೆಗಳು, ಗ್ರಾಮ ಪಂಚಾಯತಿ ಹಾಗೂ ಕೆಲವು ಖಾಸಗಿಯವರು ದಾಖಲೆಗಳಲ್ಲಿ ನಮೂದಿಸುತ್ತಿರುವುದು ಕಂಡುಬಂದಿರುವುದಿಲ್ಲ.

ಸರ್ಕಾರದ ಆದೇಶ ಸಂಖ್ಯೆ: ಕಂಇ/46/ಭೂದಾಪು/ 2013, ದಿನಾಂಕ:20-07-2013 ಮತ್ತು ಸರ್ಕಾರದ ಆದೇಶ ಸಂಖ್ಯೆ: ಕಂಇ/1/ಭೂದಾಪು/2016, ದಿನಾಂಕ: 01-03-2016ರಂತೆ ದಾಖಲೆ ರಹಿತ ಜನವಸತಿ ಪ್ರದೇಶಗಳನ್ನು ಕಂದಾಯ ಗ್ರಾಮಗಳಾಗಿ ಪರಿವರ್ತಿಸಲು ಕ್ರಮ ತೆಗೆದುಕೊಳ್ಳಲಾಗುತ್ತದೆ.

ಅದರಂತೆ, ತುಮಕೂರು ಜಿಲ್ಲೆಯ ಕೊರಟಗೆರೆ ತಾಲ್ಲೂಕಿನ ಮೂಲ ಗ್ರಾಮವಾದ ನೀಲಗೊಂಡನಹಳ್ಳಿ ಮಜರೆ ಇರಕಸಂದ್ರ ಕಾಲೋನಿ ಗ್ರಾಮವನ್ನು ಉಪ ಗ್ರಾಮವಾಗಿ ರಚನೆಗೆ ತಿದ್ದುಪಡಿ 2-ಇ ಅಧಿಸೂಚನೆಯನ್ನು (ಅಧಿಸೂಚನೆ ಸಂಖ್ಯೆ: ಭೂಉನಿ/ ಕಂದಾಯ ಗ್ರಾಮ (2ಇ) (02)/145/21-22, ದಿನಾಂಕ: 02-11-2022 ರಾಜ್ಯಪತ್ರ ದಿನಾಂಕ: 07-11-2022) ಹೊರಡಿಸಲಾಗಿದೆ.

ಸದರಿ ತಿದ್ದುಪಡಿ 2-ಇ ಅಧಿಸೂಚನೆಗೆ ಗ್ರಾಮಸ್ಥರು ತಕರಾರು ಸಲ್ಲಿಸಿರುವ ಪ್ರಯುಕ್ತ ಪ್ರಾಥಮಿಕ ಅಧಿಸೂಚನೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುವುದಿಲ್ಲವಾದ್ದರಿಂದ ಐ.ಕೆ. ಕಾಲೋನಿ ಎಂದು ಯಾವುದೇ ಅಧಿಸೂಚನೆಯಾಗಿಲ್ಲದ ಪ್ರಯುಕ್ತ ಮೂಲ ಹೆಸರಾದ ನೀಲಗೊಂಡನಹಳ್ಳಿ ಗ್ರಾಮ ಎಂದೇ ಮುಂದುವರೆಸಲಾಗುತ್ತಿದೆ.

**ಸಂಖ್ಯೆ: ಕಂಇ 216 ಎಸ್ಎಸ್ಸಿ 2024**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು